# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **888(1043)**
ಸದಸ್ಯರ ಹೆಸರು : **ಶ್ರೀಮತಿ ಹೇಮಲತಾ ನಾಯಕ್**
ಉತ್ತರಿಸುವ ದಿನಾಂಕ : 23/02/2024
ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನವನ್ನು ಆ ಭಾಗದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಯಾವ ಮಾನದಂಡದಡಿಯಲ್ಲಿ ಹಂಚಿಕೆ ಮಾಡಲಾಗುತ್ತದೆ; (ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನವನ್ನು ಡಾ.ಡಿ.ಎಂ ನಂಜುಂಡಪ್ಪ ವರದಿಯ ಸಿ.ಡಿ.ಐ ಸೂಚ್ಯಾಂಕದ ಆಧಾರದ ಮೇಲೆ ಮೈಕ್ರೋ ಯೋಜನೆಯಡಿ ತಾಲ್ಲೂಕುವನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ತಾಲ್ಲೂಕುವಾರು ಹಾಗೂ ಮ್ಯಾಕ್ರೋ ಯೋಜನೆಯಡಿ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. **ವಿಧಾನ ಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಲಾಗುತ್ತಿಲ್ಲ.** |
| ಆ) | ಸದರಿ ಮಂಡಳಿ ಅನುದಾನವನ್ನು 2014 ರಿಂದ ಇಲ್ಲಿಯವರೆಗೆ ಮ್ಯಾಕ್ರೋ ಯೋಜನೆಯಲ್ಲಿ ಜಿಲ್ಲೆಗಳಿಗೆ ಹಂಚಿಕೆ ಮಾಡಿದ ಅನುದಾನವೆಷ್ಟು; ಜಿಲ್ಲಾವಾರು, ವರ್ಷವಾರು ವಿವರ ನೀಡುವುದು; | 2014 ರಿಂದ ಇಲ್ಲಿಯವರೆಗೆ ಮ್ಯಾಕ್ರೋ ಯೋಜನೆಯಲ್ಲಿ ಜಿಲ್ಲೆಗಳಿಗೆ ರೂ.4062.66 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ವರ್ಷವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಇ) | ಮ್ಯಾಕ್ರೋ ಯೋಜನೆಯಲ್ಲಿ 2014ರಿಂದ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರ ನೀಡುವುದು; | ಮ್ಯಾಕ್ರೋ ಯೋಜನೆಯಲ್ಲಿ 2014ರಿಂದ ಇಲ್ಲಿಯವರೆಗೆ ಶಿಕ್ಷಣ, ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಲಯಗಳು ಮತ್ತು ಕೈಗಾರಿಕೆ, ಕೌಶಲ್ಯಾಭಿವೃದ್ಧಿ, ನೀರಾವರಿ, ಕುಡಿಯುವ ನೀರು, ರಸ್ತೆ ಮತ್ತು ಸಂಪರ್ಕ, ಅಂತರ್ಜಲ ಸಂರಕ್ಷಣೆ ಹಾಗೂ ಕೃಷಿ ಮತ್ತು ಕೃಷಿಗೆ ಸಂಬಂಧಿತ ವಲಯಗಳಲ್ಲಿ ಅಭಿವೃದ್ಧಿ ಅಂತರಗಳನ್ನು ಗುರುತಿಸಿ, ಆದ್ಯತೆಗನುಗುಣವಾಗಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.<br><br>ಮುಂದುವರೆದು, ಸಿ.ಸಿ ರಸ್ತೆ, ಡಾಂಬರೀಕರಣ ರಸ್ತೆ, ಸೇತುವೆ, ಚರಂಡಿ, ಒಳಚರಂಡಿ ನಿರ್ಮಾಣ, ಕುಡಿಯುವ ನೀರು ಸರಬರಾಜು, ಕೆರೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. |
| ಈ) | ಮ್ಯಾಕ್ರೋ ಯೋಜನೆಯಲ್ಲಿ ಕಲಬುರಗಿ ಜಿಲ್ಲೆಗೆ ಹೆಚ್ಚಿನ ಪ್ರಮಾಣದ ಅನುದಾನ ಬಳಸಿರುವುದರಿಂದ ಇತರೆ ಜಿಲ್ಲೆಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಮಂಡಳಿಗೆ ಸೂಕ್ತ ಮಾರ್ಗದರ್ಶನ ನೀಡಲು | -ಇಲ್ಲ-<br><br>ಡಾ.ಡಿ.ಎಂ ನಂಜುಂಡಪ್ಪ ವರದಿಯ ಸಿ.ಡಿ.ಐ ಸೂಚ್ಯಾಂಕದಂತೆ ಅನುದಾನ ಬಿಡುಗಡೆ ಮಾಡುತ್ತಿರುವುದರಿಂದ ಇತರೆ ಜಿಲ್ಲೆಗಳಿಗೆ ಅನ್ಯಾಯವಾಗದೆ ಇರುವುದರಿಂದ ಮಾರ್ಗದರ್ಶನ |

| | | |
|---|---|---|
| | ಸರ್ಕಾರಕ್ಕೆ ಇರುವ ತೊಂದರೆ ಏನು; ಯಾವ ರೀತಿಯಲ್ಲಿ ಒಂದೇ ಜಿಲ್ಲೆಗೆ ಮಂಡಳಿ ಅನುದಾನ ಬಳಕೆ ಮಾಡುವುದನ್ನು ತಡೆಯಲಾಗುವುದು; | ನೀಡುವ ಅಗತ್ಯತೆ ಇರುವುದಿಲ್ಲ. |
| **ಉ)** | ಮ್ಯಾಕ್ರೋ ಯೋಜನೆಯಲ್ಲಿ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡುವಲ್ಲಿ ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ತಾರತಮ್ಯ ಸರಿಪಡಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ? | -ಇಲ್ಲ-<br><br>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಡಾ.ಡಿ.ಎಂ ನಂಜುಂಡಪ್ಪ ವರದಿಯ ಸಿ.ಡಿ.ಐ ಸೂಚ್ಯಾಂಕದ ಆಧಾರದ ಮೇಲೆ ಮ್ಯಾಕ್ರೋ ಯೋಜನೆಯಡಿ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ, ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡಲಾಗುತ್ತಿದೆ. ಆದ್ದರಿಂದ ಯಾವುದೇ ತಾರತಮ್ಯವಾಗಿರುವುದಿಲ್ಲ. |

ಸಂಖ್ಯೆ: ಪಿಡಿಎಸ್ 21 ಹೆಚ್‌ಕೆಡಿ 2024

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :888(1043)ರ ಅನುಬಂಧ-1

## 2014-15 ರಿಂದ 2023-24ನೇ ಸಾಲಿನವರೆಗೆ ಮ್ಯಾಕ್ರೋ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿದ ಅನುದಾನ ವಿವರ

ರೂ. ಲಕ್ಷಗಳಲ್ಲಿ

| ಕ್ರ. ಸಂ. | ವಲಯ | ಜಿಲ್ಲೆ | ಒಟ್ಟು ನಿಗದಿಪಡಿಸಿದ ಮೊತ್ತ | | | | | | | | | |
|---|---|---|---|---|---|---|---|---|---|---|---|---|
| | | | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
| 1 | ಮ್ಯಾಕ್ರೋ | ಬೀದರ | 5512.33 | 4294.88 | 6427.00 | 9928.00 | 3964.57 | 5811.66 | 4385.32 | 5584.99 | 5611.28 | 11623.36 |
| 2 | | ಕಲಬುರಗಿ | 10055.11 | 8701.59 | 12128.83 | 19009.00 | 7437.21 | 10902.54 | 8226.78 | 10477.27 | 10526.58 | 21805.06 |
| 3 | | ಯಾದಗಿರಿ | 749.10 | 3362.66 | 4959.94 | 7773.00 | 3103.94 | 4550.22 | 3433.46 | 4372.74 | 4393.33 | 9100.46 |
| 4 | | ರಾಯಚೂರು | 2635.56 | 5575.21 | 7722.36 | 11926.00 | 4763.48 | 6983.02 | 5269.20 | 6710.65 | 6742.23 | 13966.05 |
| 5 | | ಕೊಪ್ಪಳ | 1072.31 | 3560.94 | 4932.34 | 7617.00 | 3042.50 | 4460.14 | 3365.50 | 4286.15 | 4306.33 | 8920.25 |
| 6 | | ಬಳ್ಳಾರಿ | 796.77 | 3828.77 | 5729.49 | 8847.00 | 4394.72 | 6442.40 | 4861.26 | 6191.11 | 2131.42 | 4415.07 |
| 7 | | ವಿಜಯನಗರ | 0.00 | 0.00 | 0.00 | 0.00 | 0.00 | 0.00 | 0.00 | 0.00 | 4088.84 | 8469.74 |
| | | **ಮ್ಯಾಕ್ರೋ ಒಟ್ಟು** | **20821.18** | **29324.05** | **41899.96** | **65100.00** | **26706.42** | **39149.98** | **29541.52** | **37622.91** | **37800.00** | **78300.00** |